# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು  ವಾರ್ಡ್ ಸಂಖ್ಯೆ: 89– ಜೋಗುಪಾಳ್ಯ ವಾರ್ಡಿನ ದಿನಾಂಕ: 17-09-2022 ರಂದು ನಡೆದ  ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(5)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 17-09-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಬಿಬಿಎಂಪಿ ಸಂಪರ್ಕ ಕೇಂದ್ರ, 1ನೇ ಮಹಡಿ, ಗುಂಡಪ್ಪ ಪಾರ್ಕ್ ಪಕ್ಕ ಜೋಗುಪಾಳ್ಯ, ಬೆಂಗಳೂರು-8** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ  ನಡವಳಿಗಳು.

## ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ.ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ ರಮೇಶ್ ರೆಡ್ಡಿ, ಶ್ರೀ. ಹೇಮಂತ್ ನಾಗ್, ಶ್ರೀ ಉಮೇಶ್ ಮತ್ತು ಶ್ರೀ ಗಣೇಶ್ ರವರು  ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು  ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಸಭೆಯಲ್ಲಿ ವಾರ್ಡಿನ ನಾಗರಿಕರಾದ ಶ್ರೀ ಮುನಿರಾಜು ರವರು ಮಾತನಾಡುತ್ತಾ ಕಂದಾಯ ವಿಭಾಗದವರು ಮತದಾನದ ಗುರುತ್ತಿನ ಚೀಟಿ ಜೊತೆ ಆಧಾರ್ ಜೋಡನೆಯ ಬಗ್ಗೆ ವಿವರವಾಗಿ ತಿಳಿಸಬೇಕೆಂದು ಹಾಗೂ ಮತದಾರರ ಪಟ್ಟಿಯಲ್ಲಿ ಹೊಸದಾಗಿ ನೊಂದಣಿ ಮಾಡಿಸುವುದು ಹಾಗೂ ಅಳಿಸುವಿಕೆಯ ಬಗ್ಗೆಯು ಯಾವ ಆಧಾರದ ಮೇಲೆ ಮಾಡುವಿರೆಂದು ಕೇಳಿರುತ್ತಾರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಗುರುತ್ತಿನ ಚೀಟಿ ಜೋತೆ ಆಧಾರ್ ಜೋಡನೆಯ ಬಗ್ಗೆ ವಾರ್ಡಿನ ಸಮಿತಿ ಸದಸ್ಯರು ವಾರ್ಡಿನಲ್ಲಿ ಪ್ರಚಾರ ಪಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನೋಡಲ್ ಅಧಿಕಾರಿರವರು ಕೋರಿದರು.

   ಕ್ರಮ :- ಸಹ ಕಂದಾಯ ಅಧಿಕಾರಿ ರವರು ಕ್ರಮ ವಹಿಸುವುದು.

2) ವಾರ್ಡಿನ ನಾಗರೀಕರಾದ ಬಿ.ಅಶ್ವಥ್ ನಾರಾಯಣ್ ರವರು ದೂರನ್ನು ನೀಡುತ್ತಾ ಜಿ ನಂ 2ನೇ ಬೀದಿಯಲ್ಲಿ ಮಳೆ ಬಂದಾಗ ಒಳಚರಂಡಿಯ ನೀರು ತುಂಬಿ ರಸ್ತೆಯಲ್ಲಿಯರಿದು ಅಕ್ಕಪಕ್ಕದ ಮನೆಗಳಿಗೆ ಚರಂಡಿಯ ನೀರು ಬರುತ್ತದೆ. ಇದರಿಂದ ವಾಸಿಸುವ ನಾಗರೀಕರಿಗೆ ಸಮಸ್ಯೆಯಾಗುತ್ತಿದ್ದು ದುರಸ್ಥಿಗೊಳಿಸಬೇಕೆಂದು ಕೇಳಿರುತ್ತಾರೆ.

   ಕ್ರಮ:- ಸಹಾಯಕ ಕಾರ್ಯಪಾಲಕರು ಕಾಮಗಾರಿ ಬಿಬಿಎಂಪಿ ರವರು ಕ್ರಮವಹಿಸುವುದು.

3) ವಾರ್ಡಿನಲ್ಲಿರುವ ಮರಗಳ ಕೊಂಬೆಗಳು ರಸ್ತೆಯಲ್ಲಿ ಅಡ್ಡಲಾಗಿ ಇರುವುದನ್ನು ತುರ್ತಾಗಿ ತೆರವುಗೊಳಿಸುವುದು.- ಅರಣ್ಯ ಇಲಾಖೆ ಬಿಬಿಎಂಪಿ ಕ್ರಮವಹಿಸುವುದು.

4) ಸಾಯಿಬಾಬ ದೇವಸ್ಥಾನ 7ನೇ ಮುಖ್ಯ ಬೀದಿಯಿಂದ ರಾಜಕಾಲುವೆಯವರಿಗೆ ಸಂಪರ್ಕಿಸುವ ರಸ್ತೆ ಮಾರಪ್ಪ ಹಾಗೂ ಮುನಿಸ್ವಾಮಪ್ಪ ರಸ್ತೆಯ ಒಳಚರಂಡಿಯ ಹುಲೆತ್ತುವುದು- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.

೫) ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡಿನ ನಾಗರಿಕರಾದ ಶ್ರೀ ಮುನಿರಾಜು ರವರು ಒಳಚರಂಡಿ ಅಳವಡಿಸಿದ ನಂತರ ರಸ್ತೆ ದುರಸ್ಥಿ ಮಾಡದಿರುವ ಬಗ್ಗೆ ಸೂಕ್ತ ಕ್ರಮಕ್ಕಾಗಿ ಕೇಳರುತ್ತಾರೆ. ಉದಾ: ಜೋಗುಪಾಳ್ಯ 12ನೇ ಬೀದಿ, 13ನೇ ಬೀದಿ ಅದರ ಅಕ್ಕಪಕ್ಕ ಅಡ್ಡರಸ್ತೆಗಳು ಮತ್ತು ಜೋಗುಪಾಳ್ಯ ೫ನೇ ಬೀದಿ ಹಾಗೂ ನಂದನವನ ಡಿ ರಸ್ತೆಗಳಲ್ಲಿ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದು ಸುಮಾರು 6 ತಿಂಗಳಾದರು ರಸ್ತೆಯನ್ನು ದುರಸ್ಥಿಗೊಳ್ಳದೆ ಇರುವುದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದರಿಂದ ಕೂಡಲೆ ರಸ್ತೆ ದುರಸ್ಥಿಗೊಳಸಬೇಕೆಂದು ಕೋರಿರುತ್ತಾರೆ ಹಾಗೂ ವಾರ್ಡಿನಲ್ಲಿ ಅತಿಯಾದ ರಸ್ತೆ ಗುಂಡಿಗಳದ್ದು ಅದನು ಮುಚ್ಚಿಸಬೇಕೆಂದು ಕೇಳರುತ್ತಾರೆ._ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.

೬) ವಾರ್ಡಿನ ಸಮೀತಿ ಸದ್ಯಸರಾದ ಶ್ರೀ ಗಣೇಶ್ ರವರು ದೂರನ್ನು ನೀಡುತ್ತಾ BWSSB ರವರು 10ನೇ ಬೀದಿ ಹಾಗೂ ಸುತ್ತಮುತ್ತ ಬೀದಿಗಳಲ್ಲಿ ಸಮರ್ಪಕವಾಗಿ ಕಾವೇರಿ ನೀರನ್ನು ಬಿಡುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೆ BWSSB ರವರು ಕ್ರಮ ವಹಿಸಬೇಕೆಂದು ಕೋರಿರುತ್ತಾರೆ._ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB ರವರು ಕ್ರಮವಹಿಸುವುದು

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಸಿದರು.

**ನೊಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಸಕಛೇರಿ ಪ್ರತಿ